**ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ದಿನಾಂಕ: 27.11.2018 ರಂದು ನಡೆದ ಪ್ರಾದೇಶಿಕ ಆಯುಕ್ತರುಗಳು, ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಮ್ಮೇಳನದ ನಡವಳಿಗಳು.**

**(ಸಭೆಯಲ್ಲಿ ಹಾಜರಿದ್ದ ಸಚಿವರುಗಳು ಹಾಗೂ ಅಧಿಕಾರಿಗಳ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿದೆ).**

ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಸಭೆಗೆ ಆಗಮಿಸಿದ ಮಾನ್ಯ ಮುಖ್ಯ ಮಂತ್ರಿಯವರನ್ನು, ಮಾನ್ಯ ಉಪ ಮುಖ್ಯಮಂತ್ರಿಯವರನ್ನು, ಮಾನ್ಯ ಸಚಿವ ಸಂಪುಟದ ಸಚಿವರುಗಳನ್ನು, ಸರ್ಕಾರದ ಹಿರಿಯ ಅಧಿಕಾರಿಗಳನ್ನು, ಎಲ್ಲಾ ಪ್ರಾದೇಶಿಕ ಆಯುಕ್ತರು, ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳನ್ನು ಸಭೆಗೆ ಸ್ವಾಗತಿಸಿ, ಈ ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಮುಖ್ಯಮಂತ್ರಿಯವರನ್ನು ಕೋರಿದರು

ನಿಧನಹೊಂದಿದ ಮಾಜಿ ಸಂಸದ ಹಾಗೂ ಮಾಜಿ ಸಚಿವರಾದ ನಟ ಅಂಬರೀಶ್, ಕೇಂದ್ರ ಸಚಿವರಾದ ಅನಂತ್‌ಕುಮಾರ್ ಹಾಗೂ ಮಾಜಿ ಕೇಂದ್ರ ಸಚಿವರಾದ ಜಾಫರ್ ಷರೀಫ್ ಇವರಿಗೆ ಸಭೆಯಲ್ಲಿ ರಾಜ್ಯ ಸರ್ಕಾರದ ವತಿಯಿಂದ ಸಂತಾಪ ಸೂಚಿಸಲು ಒಂದು ನಿಮಿಷ ಮೌನ ಆಚರಿಸಲಾಯಿತು.

ಸಂವಿಧಾನ ದಿನದ ಅಂಗವಾಗಿ ಸಂವಿಧಾನ ದಿನದ ಪ್ರತಿಜ್ಞೆಯನ್ನು ಮಾನ್ಯ ಮುಖ್ಯಮಂತ್ರಿಯವರು ಬೋಧಿಸಿದರು.

**ಸಭೆಯ ಕಾರ್ಯಸೂಚಿ ಪ್ರಕಾರ ವಿವಿಧ ಜಿಲ್ಲೆಗಳ ಹಾಗೂ ಇಲಾಖೆಗಳ ಪ್ರಗತಿ ಪರಿಶೀಲನೆ ಬಗ್ಗೆ ವಿಸ್ತೃತವಾಗಿ ಚರ್ಚಿಸಿ ಎಲ್ಲಾ ಜಿಲ್ಲಾಧಿಕಾರಿಗಳಿಗೆ / ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಈ ಕೆಳಕಂಡತೆ ಸೂಚನೆ/ ನಿರ್ದೇಶನವನ್ನು ನೀಡಲಾಯಿತು.**

## ರೈತರ ಬೆಳೆ ಸಾಲ ಮನ್ನಾ :

1) ಸರ್ಕಾರದ ಪ್ರಮುಖ ಕಾರ್ಯಕ್ರಮವಾದ ರೈತರ ಸಾಲಮನ್ನಾ ಯೋಜನೆ ಅನುಷ್ಠಾನಕ್ಕೆ ತರಲು ರಾಜ್ಯಮಟ್ಟದ ಸಮಿತಿಯನ್ನು ರಚಿಸಲಾಗಿದೆ. ಬ್ಯಾಂಕ್ ಹಾಗೂ ಸಹಕಾರಿ ಬ್ಯಾಂಕ್‌ಗಳ ಮಾಹಿತಿಯನ್ನು ಶೀಘ್ರವಾಗಿ ನೀಡಿ ಸಾಲಮನ್ನಾ ಯೋಜನೆ ರೈತರಿಗೆ ದೊರಕುವಂತೆ ಮಾಡಬೇಕು. ಮಧ್ಯವರ್ತಿಗಳು ಹಣದುರುಪಯೋಗ ಮಾಡದಂತೆ ತಡೆಗಟ್ಟಲು ಕ್ರಮ ಕೈಗೊಳ್ಳಬೇಕು.

**(ಕ್ರಮ: ಎಲ್ಲಾ ಜಿಲ್ಲಾಧಿಕಾರಿಗಳು, ಆರ್ಥಿಕ, ಸಹಕಾರ ಇಲಾಖೆಗಳು)**

2) ರೈತರ ಸಾಲಮನ್ನಾಗೆ ಸಂಬಂಧಿಸಿದಂತೆ ವಾಣಿಜ್ಯ ಬ್ಯಾಂಕ್‌ಗಳ ಖಾತೆಗಳ ಮಾಹಿತಿಯನ್ನು ಪಡೆಯಲಾಗಿದ್ದು, ಅದನ್ನು ಸಂಬಂಧಪಟ್ಟವರ ಆಧಾರ್ ಕಾರ್ಡ್, ಪಡಿತರ ಚೀಟಿ, ಮುಂತಾದ ದಾಖಲೆಗಳೊಂದಿಗೆ ಪರಿಶೀಲಿಸಲು ಭೂಮಿ ಮಾನಿಟರಿಂಗ್ ಸೆಲ್‌ನಲ್ಲಿ ತಂತ್ರಾಂಶವೊಂದನ್ನು ಅಭಿವೃದ್ಧಿಪಡಿಸಲಾಗಿದ್ದು, ಪ್ರಯೋಗಾತ್ಮಕವಾಗಿ ಸದರಿ ತಂತ್ರಾಂಶವನ್ನು ಸೇಡಂ ಮತ್ತು ದೊಡ್ಡಬಳ್ಳಾಪುರದಲ್ಲಿ ಅಳವಡಿಸಲಾಗಿದೆ. ಇದರ ಉಸ್ತುವಾರಿಯನ್ನು ನೋಡಿಕೊಳ್ಳಲು ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಸ್ಟಿಯರಿಂಗ್ ಕಮಿಟಿ ಮತ್ತು ತಾಂತ್ರಿಕ ಅಂಶವನ್ನು ಪರಿಶೀಲಿಸಿ

ಅಪರ ಮುಖ್ಯ ಕಾರ್ಯದರ್ಶಿ, ಸಿಆಸುಇ (ಇ-ಆಡಳಿತ) ಇವರ ಅಧ್ಯಕ್ಷತೆಯಲ್ಲಿ ಸಮಿತಿಗಳನ್ನು ರಚಿಸಲಾಗಿದೆ. ಪ್ರತಿ ಜಿಲ್ಲೆಯಲ್ಲಿ ಬ್ಯಾಂಕಿನ ಪ್ರತಿನಿಧಿಯನ್ನೊಳಗೊಂಡ ಪ್ರತ್ಯೇಕ ಕೋಶವೊಂದನ್ನು ತೆರೆಯಲು ನಿರ್ಧರಿಸಲಾಗಿದ್ದು ಅದನ್ನು ಕಾರ್ಯಗತಗೊಳಸುವುದು.

**(ಕ್ರಮ: ಆರ್ಥಿಕ ಇಲಾಖೆ, ಸಹಕಾರ ಇಲಾಖೆ, ಸಿ.ಆ.ಸು.ಇ (ಇ-ಆಡಳಿತ) ಮತ್ತು ಕಂದಾಯ ಇಲಾಖೆ)**

3) ಪ್ರಾಯೋಗಿಕ ತಾಲೂಕುಗಳಲ್ಲಿ ಡಿಸೆಂಬರ್ ಮೊದಲವಾರದೊಳಗಾಗಿ ಡಾಟಾ ಎಂಟ್ರಿ ಮತ್ತು ಆಧಾರ್ ಲಿಂಕ್ ಕಾರ್ಯವನ್ನು ಮುಗಿಸಿ ಸಂಬಂಧಪಟ್ಟ ಫಲಾನುಭವಿಗಳಿಗೆ ಸಾಲಮನ್ನಾ ಪತ್ರಗಳನ್ನು ವಿತರಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

**(ಕ್ರಮ: ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು)**

4) ಗ್ರಾಮೀಣ ಭಾಗಗಳಲ್ಲಿ ಅಂತರ್ ಜಾಲ (Internet) ಮತ್ತು ಗಣಕಯಂತ್ರ ಲಭ್ಯತೆ ಇಲ್ಲದೇ ಇರುವುದರಿಂದ ಹಾಗೂ ಸಾಲಮನ್ನಾಗೆ ಸಂಬಂಧಪಟ್ಟ ಅರ್ಜಿಯಲ್ಲಿ ಭರ್ತಿ ಮಾಡಬೇಕಾದ ಅಂಶಗಳು ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಅರ್ಜಿಗಳನ್ನು ಸರಳೀಕರಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

**(ಕ್ರಮ: ಆರ್ಥಿಕ ಇಲಾಖೆ, ಸಹಕಾರ ಇಲಾಖೆ ಮತ್ತು ಕಂದಾಯ ಇಲಾಖೆ)**

5) ಸಾಲಮನ್ನಾ ವಿಚಾರದಲ್ಲಿ ಪ್ರಾಯೋಗಿಕ ತಾಲೂಕುಗಳಲ್ಲಿ ಪ್ರಸ್ತುತ ಎಲ್ಲಾ ಪರಿಶೀಲನೆ ಕಾರ್ಯಗಳು ಮುಗಿದಿರುವ ಖಾತೆಗಳ ಫಲಾನುಭವಿಗಳಿಗೆ ಡಿಸೆಂಬರ್ ಮೊದಲ ವಾರದಲ್ಲಿ ಸಾಲಮನ್ನಾ ಪತ್ರವನ್ನು ನೀಡಲು ಬಹಿರಂಗ ಸಭೆಯೊಂದನ್ನು ಆಯೋಜಿಸಿ, ಹಕ್ಕು ಪತ್ರವನ್ನು ವಿತರಿಸಲು ಕ್ರಮ ಕೈಗೊಳ್ಳುವುದು.

**(ಕ್ರಮ: ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು)**

6) **ಬಡವರ ಬಂಧು** ಕಾರ್ಯಕ್ರಮವನ್ನು ಬಡ ಜನರ ಹಾಗೂ ಬೀದಿ ಬದಿಯ ವ್ಯಾಪಾರಿಗಳ ಗಮನಕ್ಕೆ ತಂದು ಅವರ ಸಮಸ್ಯೆಗಳ ವಿವರ ಪಡೆದು **ಬಡವರ ಬಂಧು** ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಕ್ರಮವಹಿಸಬೇಕು

**ಕ್ರಮ: ಎಲ್ಲಾ ಜಿಲ್ಲಾಧಿಕಾರಿಗಳು, ಸಹಕಾರ ಇಲಾಖೆ)**

**ಪ್ರಕೃತಿ ವಿಕೋಪ** :

7) ರಾಜ್ಯವು ಮುಂದಿನ ತಿಂಗಳುಗಳಲ್ಲಿ ಮಳೆಯ ಅಭಾವದಿಂದ ಕ್ಲಿಷ್ಟ ಪರಿಸ್ಥಿತಿಯನ್ನು ಅನುಭವಿಸುವ ಸಂಭವವಿರುವುದರಿಂದ ಸ್ಥಿತಿಯನ್ನು ಸಮರ್ಥವಾಗಿ ಎದುರಿಸಲು ಅಧಿಕಾರಿಗಳು ಸೂಕ್ತ ಯೋಜನೆಯನ್ನು ಹಾಕಿಕೊಳ್ಳಲು ಮತ್ತು ಯೋಜನೆಯ ಅನುಷ್ಠಾನಕ್ಕಾಗಿ ಎಸ್.ಡಿ.ಆರ್.ಎಫ್ ಹಣವನ್ನು ಬಳಕೆ ಮಾಡುವಂತೆ ತಿಳಿಸಲಾಯಿತು.

**(ಕ್ರಮ: ಎಲ್ಲಾ ಜಿಲ್ಲಾಧಿಕಾರಿಗಳು / ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು)**

8) ನರೇಗಾ ಯೋಜನೆಯಲ್ಲಿ ಶೇಕಡಾ 100 ರಷ್ಟು ಉದ್ಯೋಗ ಸೃಷ್ಟಿಸುವ ನಿಟ್ಟಿನಲ್ಲಿ ಗ್ರಾಮ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಖುದ್ದು ಪರಿವೀಕ್ಷಣೆ ಮಾಡಿ ಸೂಕ್ತ ಕ್ರಮವನ್ನು ಜರುಗಿಸಲು ತಿಳಸಲಾಯಿತು

**(ಕ್ರಮ: ಎಲ್ಲಾ ಜಿಲ್ಲಾಧಿಕಾರಿಗಳು / ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಣಾಧಿಕಾರಿಗಳು)**

9) ಕೊಡಗು ಮತ್ತು ಇತರೆ ಜಿಲ್ಲೆಗಳಲ್ಲಿ ಅತಿವೃಷ್ಟಿಯಿಂದ ಉಂಟಾದ ಆಸ್ತಿ-ಪಾಸ್ತಿ ನಷ್ಟದ ಕುರಿತು ಪರಿಹಾರ ಕಾರ್ಯವನ್ನು ಕೈಗೊಳ್ಳಲು ರೂ.4500/- ಕೋಟಿಗಳ ಪರಿಹಾರ ಧನಕ್ಕಾಗಿ ಬೇಡಿಕೆಯನ್ನು ಸಲ್ಲಿಸಲಾಗಿ. ಕೇಂದ್ರ ಸರ್ಕಾರವು ರೂ.546/- ಕೋಟಿಗಳ ಪರಿಹಾರವನ್ನು ಒದಗಿಸಿದ್ದು. ನೈಸರ್ಗಿಕ ವಿಕೋಪದಿಂದ ಹಾನಿಗೊಳಗಾದ ಎಲ್ಲಾ ಪ್ರದೇಶಗಳನ್ನು ಆದ್ಯತೆಯ ಮೇರೆಗೆ ಪರಿಹಾರ ಕಾಮಗಾರಿಗಳನ್ನು ಶೀಘ್ರವಾಗಿ ಕೈಗೊಳ್ಳುವಂತೆ ಸೂಚಿಸಲಾಯಿತು.

**(ಕ್ರಮ: ಸಂಬಂಧಿಸಿದ ಜಿಲ್ಲಾಧಿಕಾರಿಗಳು / ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಣಾಧಿಕಾರಿಗಳು)**

10) ರಾಜ್ಯದಲ್ಲಿ ಈಗಾಗಲೇ 100 ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳಾಗಿ ಘೋಷಿಸಿದ್ದು. **ರಾಜ್ಯದಲ್ಲಿ ಶೇ.49 ರಷ್ಟು ಮಳೆಯ ಕೊರತೆಯಿದೆ.** ಈ ಕಾರಣದಿಂದ ಮುಂಬರುವ ದಿನಗಳಲ್ಲಿ ಈ ಪಟ್ಟಿಗೆ ಇನ್ನೂ ಕೆಲವು ತಾಲ್ಲೂಕುಗಳು ಸೇರಿಕೊಳ್ಳುವ ಸಾಧ್ಯತೆಗಳದ್ದು. ಈ ಬಗ್ಗೆ ಸೂಕ್ತ ಮುಂಜಾಗ್ರತೆ ಕ್ರಮವಹಿಸಿ. ಜನರು ಗುಳೆ ಹೋಗುವುದನ್ನು ತಪ್ಪಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

**(ಕ್ರಮ: ಎಲ್ಲಾ ಜಿಲ್ಲಾಧಿಕಾರಿಗಳು / ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಣಾಧಿಕಾರಿಗಳು)**

11) ಇನ್ಪುಟ್ ಸಬ್ಸಿಡಿಯನ್ನು ರೈತರಿಗೆ ನೇರವಾಗಿ ಅವರ ಬ್ಯಾಂಕ್ ಖಾತೆಗೆ ಜಮೆ ಮಾಡಲು ಸಾಫ್ಟ್‌ವೇರ್ ಒಂದನ್ನು ಸಿದ್ಧಪಡಿಸಲಾಗಿದ್ದು, ಎಲ್ಲಾ ಫಲಾನುಭವಿಗಳ ಖಾತೆಗಳಿಗೆ ನೇರವಾಗಿ ಪರಿಹಾರ ಧನವನ್ನು ಪಾವತಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

**(ಕ್ರಮ: ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ)**

12) ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ಎಲ್ಲಾ ಜಿಲ್ಲೆಗಳಲ್ಲಿ ಪಿ.ಡಿ. ಖಾತೆಗಳಲ್ಲಿ ಒಟ್ಟಿಗೆ 200 ಕೋಟಿಗಳಗೂ ಹೆಚ್ಚು ಅನುದಾನ ಲಭ್ಯವಿದ್ದು. ಈ ಅನುದಾನವನ್ನು ಸೂಕ್ತವಾಗಿ ವಿನಿಯೋಗಿಸಿಕೊಂಡು ಕುಡಿಯುವ ನೀರಿನ ಸರಬರಾಜಿನಲ್ಲಿ ಯಾವುದೇ ವ್ಯತ್ಯಯ ಉಂಟಾಗದಂತೆ ಜಾಗ್ರತೆ ವಹಿಸಲು ಸೂಚನೆ ನೀಡಲಾಯಿತು.

**(ಕ್ರಮ: ಎಲ್ಲಾ ಜಿಲ್ಲಾಧಿಕಾರಿಗಳು / ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಣಾಧಿಕಾರಿಗಳು)**

13) ಪ್ರಸಕ್ತ ಸಾಲಿನಲ್ಲಿ ನರೇಗಾ ಯೋಜನೆಯಡಿಯಲ್ಲಿ ಕಲಬುರಗಿ ಜಿಲ್ಲೆಯ ಸಾಧನೆಯು ತೃಪ್ತಿಕರವಾಗಿಲ್ಲವಾದ್ದರಿಂದ ಈ ನಿಟ್ಟಿನಲ್ಲಿ ಸುಧಾರಿಸಲು ಸೂಚಿಸಲಾಯಿತು.

**(ಕ್ರಮ: ಜಿಲ್ಲಾಧಿಕಾರಿ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕಲಬುರಗಿ)**

14) ಬೆಣ್ಣೆತೊರ ಯೋಜನೆಗೆ ಅನುದಾನವನ್ನು ಒದಗಿಸಲು ಗ್ರಾಮೀಣಾಭಿವೃದ್ಧಿ ಇಲಾಖೆ ಒಪ್ಪಿದಲ್ಲಿ ಸದರಿ ಯೋಜನೆಯನ್ನು ತ್ವರಿತಗತಿಯಲ್ಲಿ ಮುಗಿಸಲು ಅನುಕೂಲವಾಗುವುದೆಂದು ಮಾನ್ಯ ಸಮಾಜ ಕಲ್ಯಾಣ ಸಚಿವರು ತಿಳಿಸಿದರು. ಇದಕ್ಕೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಮಚಾಯತ ರಾಜ್ಯ ಸಚಿವರು ಸಧ್ಯದಲ್ಲಿಯೇ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಾಗಿ ತಿಳಿಸಿದರು.

**(ಕ್ರಮ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ)**

15) ಯಾದಗಿರಿ ಜಿಲ್ಲೆಯಲ್ಲಿನ 3 ತಾಲ್ಲೂಕುಗಳು ಬರಪೀಡಿತವಾಗಿದ್ದು, ಮೇವಿನ ಸಮಸ್ಯೆ ಸಂಭವಿಸುವುದರಿಂದ ಕಲಬುರಗಿಯಲ್ಲಿ ಮೇವಿನ ಶೇಖರಣೆಯನ್ನು ಮಾಡುವುದು ಒಳ್ಳೆಯದು ಎಂದು ತಿಳಿಸಲಾಯಿತು.

**(ಕ್ರಮ: ಜಿಲ್ಲಾಧಿಕಾರಿ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕಲಬುರಗಿ ಮತ್ತು ಯಾದಗಿರಿ)**

16) ನಾಲ್ಕೈದು ಜಿಲ್ಲೆಗಳಲ್ಲಿ ಈರುಳ್ಳಿ ಬೆಲೆ ಕುಸಿದ ಕಾರಣ ಪ್ರತಿಭಟನೆ ಕೈಗೊಳ್ಳುತ್ತಿದ್ದು, ಇದಕ್ಕೆ ಆಸ್ಪದ ಕೊಡದಂತೆ ಬೆಂಬಲ ಬೆಲೆ ನಿಗದಿಗೊಳಿಸುವಂತೆ ತಿಳಿಸಿ, ಬಾಗಲಕೋಟೆ, ಹುಬ್ಬಳ್ಳಿ, ಧಾರವಾಡ ಇಲ್ಲಿ ಈರುಳ್ಳಿಗೆ ಸಂಬಂಧಿಸಿದಂತೆ ಈರುಳ್ಳಿ ಬೆಲೆಯು ಕಡಿಮೆ ಆದಲ್ಲಿ ಬೆಂಬಲ ಬೆಲೆಯನ್ನು ನಿಗದಿಗೊಳಿಸಬೇಕಾಗಿ ತಿಳಿಸಲಾಯಿತು.

**(ಕ್ರಮ: ಸಹಕಾರ ಇಲಾಖೆ)**

17) ರೈತರ ಆತ್ಮ ಹತ್ಯೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಇತ್ಯರ್ಥಕ್ಕೆ ಬಾಕಿಯಿರುವ ಪ್ರಕರಣಗಳನ್ನು ತ್ವರಿತವಾಗಿ ಬಗೆಹರಿಸಲು ಸೂಚಿಸಲಾಯಿತು. ಎಫ್.ಎಸ್.ಎಲ್ ವರದಿಗಳು ಸ್ವೀಕೃತವಾಗದೆ ಪ್ರಕರಣಗಳು ಬಾಕಿಯಿರುವುದರ ಬಗ್ಗೆ ಗಮನಸೆಳೆಯಲಾಗಿ, ವಿಧಿ-ವಿಜ್ಞಾನ ಇಲಾಖೆಗೆ ರೈತರ ಆತ್ಮಹತ್ಯೆ ಕುರಿತಂತಹ ಪ್ರಕರಣಗಳಲ್ಲಿ 10 ದಿನಗಳೊಳಗೆ ವರದಿಯನ್ನು ಕೊಡಲು ನಿರ್ದೇಶಕರು ಎಫ್.ಎಸ್ ಎಲ್ ಇವರ ಆದೇಶವಿದ್ದು, ಈ ಬಗ್ಗೆ ಹಿಂಬಾಲಿಸಲು ಸೂಚಿಸಲಾಯಿತು.

**(ಕ್ರಮ: ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು)**

18) ಬೆಳೆ ವಿಮೆ ನೊಂದಣಿಗೆ ಹಾಗೂ ಬೆಳೆ ಸಮೀಕ್ಷೆಗೆ ಸಂಬಂಧಪಟ್ಟಂತೆ ಸಾಫ್ಟ್‌ವೇರ್‌ವೊಂದನ್ನು ಅಭಿವೃದ್ಧಿ ಪಡಿಸಲಾಗಿದ್ದು, ಸದರಿ ಸಾಫ್ಟ್‌ವೇರ್‌ನ್ನು "ಪರಿಹಾರ" ಸಾಫ್ಟ್‌ವೇರ್‌ನೊಂದಿಗೆ ಲಿಂಕ್ ಮಾಡಲಾಗಿದ್ದು, ಬೆಳೆಹಾನಿ ಸಂದರ್ಭದಲ್ಲಿ ಪರಿಹಾರ ಕಲ್ಪಿಸಲು ಬಳಸುವಂತೆ ಸೂಚಿಸಲಾಯಿತು.

**(ಕ್ರಮ: ಎಲ್ಲಾ ಜಿಲ್ಲಾಧಿಕಾರಿಗಳು)**

19) ವೃದ್ಧಾಪ್ಯ ವೇತನ, ಅಂಗವಿಕಲ ಮಾಸಾಶನ ಮತ್ತು ಇತರ ಸಾಮಾಜಿಕ ಭದ್ರತಾ ಯೋಜನೆಗಳು ಮೂರು ತಿಂಗಳಿನಿಂದ ಪಾವತಿ ಮಾಡದೇ ಬಾಕಿ ಇದ್ದು, ಸದರಿ ಪಿಂಚಣಿಗಳು

ಪಾವತಿಯಾಗುವಂತೆ ವ್ಯವಸ್ಥೆ ಮಾಡುವುದು. ಜಿಲ್ಲಾಧಿಕಾರಿಗಳು ನಿಯಮಿತವಾಗಿ ಕಂದಾಯ ಅದಾಲತ್. ಪಿಂಚಣಿ ಅದಾಲತ್‌ಗಳನ್ನು ನಡೆಸಲು ಸೂಚಿಸಲಾಯಿತು

**(ಕ್ರಮ: ಎಲ್ಲಾ ಜಿಲ್ಲಾಧಿಕಾರಿಗಳು)**

20) ಜಿಲ್ಲಾ ಪಂಚಾಯ್ತಿ. ತಾಲ್ಲೂಕು ಪಂಚಾಯ್ತಿ ಮತ್ತು ಗ್ರಾಮ ಪಂಚಾಯ್ತಿ ಹಂತದಲ್ಲಿ ವಸತಿ ಯೋಜನೆಗೆ ಸಂಬಂಧಿಸಿದಂತೆ ಅರ್ಜಿಗಳು ಬಾಕಿಯಿದ್ದು ಅವುಗಳನ್ನು ಶೀಘ್ರವಾಗಿ ಇತ್ಯರ್ಥಮಾಡುವಂತೆ ಸೂಚಿಸಲಾಯಿತು.

**(ಕ್ರಮ: ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು)**

21) ಸರ್ಕಾರಿ ಆಸ್ಪತ್ರೆಗಳಲ್ಲಿ ಸ್ಪೆಷಲಿಸ್ಟ್ ವೈದ್ಯರ ಅಲಭ್ಯತೆಯನ್ನು ನಿವಾರಿಸಲು ಸ್ಪೆಷಲಿಸ್ಟ್ ವೈದ್ಯರ ಸೇವೆಯನ್ನು ಗುತ್ತಿಗೆ/ ರಿಟೇನರ್‌ಷಿಪ್ ಆಧಾರದ ಮೇಲೆ ಪಡೆಯಲು ಸೂಚಿಸಲಾಯಿತು.

**(ಕ್ರಮ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ / ಎಲ್ಲಾ ಜಿಲ್ಲಾಧಿಕಾರಿಗಳು)**

22) ಒಂದು ಕಿಲೋಮೀಟರ್‌ಗಳೊಳಗೆ ಇರುವ ವಿವಿಧ ಶಾಲೆಗಳ ಸಮೀಕರಣ ಪ್ರಕ್ರಿಯೆಯನ್ನು ಪೂರ್ಣಗೊಳಸಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಲಭ್ಯವಿರುವ ಶಿಕ್ಷಕರ ಸೇವೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಸೂಚಿಸಲಾಯಿತು.

**(ಕ್ರಮ: ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಮತ್ತು ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು)**

23) ಶಿಥಿಲಗೊಂಡ ಶಾಲೆಗಳ ರಿಪೇರಿ ಕಾರ್ಯವನ್ನು ಶೀಘ್ರವಾಗಿ ಕೈಗೊಳ್ಳುವಂತೆ ಸೂಚಿಸಲಾಯಿತು

**(ಕ್ರಮ: ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಮತ್ತು ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು)**

24) ಶಿಕ್ಷಕರ ವೇತನ ವಿಳಂಬವಾಗದಂತೆ ವೇತನ ಪಾವತಿಗೆ ಬೇಕಾಗುವ ಅಂದಾಜನ್ನು ಸಕಾಲಕ್ಕೆ ಮಾಡಿ ನಿಗದಿತ ಅವಧಿಯಲ್ಲಿ ಪಾವತಿ ಮಾಡಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

**(ಕ್ರಮ: ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಮತ್ತು ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು)**

25) ವಿದ್ಯಾರ್ಥಿಗಳಿಗೆ ನೀಡುತ್ತಿರುವ ಸೈಕಲ್ ಗುಣಮಟ್ಟ ಕಳಪೆಯಾಗಿರುವುದರಿಂದ ತಕ್ಷಣವೇ ಈ ಸೈಕಲ್‌ಗಳ ಸರಬರಾಜನ್ನು ನಿಲ್ಲಿಸಿ ತನಿಖೆ ನಡೆಸಲು ಮತ್ತು ಗುಣಮಟ್ಟ ಪರೀಕ್ಷಿಸಲು ಸೂಚಿಸಲಾಯಿತು.

**(ಕ್ರಮ: ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಮತ್ತು ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು)**

26) ಅವೈಜ್ಞಾನಿಕ ಮರಳು ಗಣಿ ಮತ್ತು ಕ್ವಾರಿಗಳನ್ನು ಪ್ರತಿಬಂಧಿಸಲು ಸೂಕ್ತ ಕಾನೂನು ನಿಯಮಗಳನ್ನು ಜಾರಿಗೆ ತರುವ ಅಗತ್ಯವಿದ್ದು. ಈ ಬಗ್ಗೆ ಸೂಕ್ತ ನೀತಿಯನ್ನು ಸಿದ್ಧಪಡಿಸುವಂತೆ ಸಂಬಂಧಪಟ್ಟ ಕಾರ್ಯದರ್ಶಿಗಳಿಗೆ ಸೂಚಿಸಲಾಯಿತು.

**(ಕ್ರಮ: ವಾಣಿಜ್ಯ ಮತ್ತು ಕೈಗಾರಿಕೆ (ಗಣಿ) ಇಲಾಖೆ)**

27) ಉತ್ತರ ಕರ್ನಾಟಕದಲ್ಲಿ ಸಕ್ಕರೆ ಕಾರ್ಖಾನೆ ಮಾಲೀಕರ ಸಭೆ ಕರೆದು ಬಾಕಿ ಬಿಲ್ಲುಗಳ ಪಾವತಿ ಕುರಿತು ಸಮಾಲೋಚನೆ ನಡೆಸಿ ರೈತರಿಗೆ ಬರಬೇಕಾದ ಬಾಕಿ ಹಣದ ಪಾವತಿ ಬಗ್ಗೆ ಕ್ರಮವಹಿಸುವುದು ರೈತರು ಪ್ರತಿಭಟನೆ ಮಾಡಲು ಬೀದಿಗೆ ಬರುವ ಯಾವುದೇ ಆಸ್ಪದವನ್ನು ನೀಡದಂತೆ ಮತ್ತು ಅವರುಗಳ ಸಮಸ್ಯೆಗಳನ್ನು ಬಗೆಹರಿಸಲು ಕ್ರಮ ವಹಿಸುವುದು.

**(ಕ್ರಮ: ಸಹಕಾರ ಇಲಾಖೆ ಮತ್ತು ಎಲ್ಲಾ ಜಿಲ್ಲಾಧಿಕಾರಿಗಳು)**

28) ರಾಜ್ಯದಲ್ಲಿನ ಪ್ರತಿ ಹಳ್ಳಿಯಲ್ಲಿನ ಆಂತರಿಕ ಹಾಗು ಸಂಪರ್ಕ ರಸ್ತೆಗಳ ಮ್ಯಾಪ್ ತಯಾರಿಸಿ ಕಾಮಗಾರಿಗಳ ಪುನರಾವರ್ತನೆ ಆಗುವುದನ್ನು ತಪ್ಪಿಸಲು ರಸ್ತೆ ಇತಿಹಾಸ ತಂತ್ರಾಂಶ ಕಡ್ಡಾಯವಾಗಿ ಉಪಯೋಗಿಸಲು ಕ್ರಮ ಕೈಗೊಳ್ಳುವುದು.

**(ಕ್ರಮ: ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು)**

29) ಜನಸಂಪರ್ಕ ಹಾಗು ಜನಸ್ಪಂದನ ಸಭೆ ಹಮ್ಮಿಕೊಂಡು ಜನಪರವಾದ ಆಡಳಿತವನ್ನು ನೀಡುವುದು.

**(ಕ್ರಮ: ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು)**

ಈ ಸಭೆಯಲ್ಲಿ ನೀಡಿರುವ ಎಲ್ಲಾ ಸಲಹೆ / ಸೂಚನೆ / ನಿರ್ದೇಶನಗಳನ್ನು ಚಾಚೂ ತಪ್ಪದೇ ಪಾಲಿಸಿ ಮುಂದೆ ನಡೆಯುವ ಸಭೆಯೊಳಗೆ ಅಧಿಕಾರಿಗಳು ಹೆಚ್ಚಿನ ಪ್ರಗತಿ ಸಾಧಿಸಿರುತ್ತಾರೆ ಎಂಬ ವಿಶ್ವಾಸನವನ್ನು ವ್ಯಕ್ತಪಡಿಸುತ್ತಾ, ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಸಲಾಯಿತು.

**ಕಡತ ಸಂಖ್ಯೆ: ಸಿಆಸುಇ 09 ಗಕಾಸ 2018.**

**(ಹೆಚ್.ಡಿ. ಕುಮಾರಸ್ವಾಮಿ)**
**ಮುಖ್ಯಮಂತ್ರಿ.**